*ಬೆಂಗಳೂರು ನಗರದಲ್ಲಿ ಮೆಟ್ರೊ ಬಸ್ ಸೌಲಭ್ಯ.*

4216(4341) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿ ಮೆಟ್ರೋಬಸ್ ಸೌಲಭ್ಯ ಒದಗಿಸಲು ಕೇಂದ್ರ ಸರ್ಕಾರದ ಅನುಮತಿ ಪಡೆಯಲಾಗಿದೆಯೆ;

ಆ) ಹಾಗಿದ್ದಲ್ಲಿ, ಈ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು;

ಇ) ಈ ಯೋಜನೆಯನ್ನು ಎಂದು ಪ್ರಾರಂಭಿಸಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ (ಸಾರಿಗೆ ಸಚಿವರು) :—

ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಬೆಂಗಳೂರು ಮೆಟ್ರೋ ಬಸ್ ಯೋಜನೆಯನ್ನು 4 ಹಂತದಲ್ಲಿ ಕಾರ್ಯಗತಗೊಳಿಸಲು ಸರ್ಕಾರದ ಆದೇಶ ಸಂಖ್ಯೆ ಹೆಚ್‌ಟಿಡಿ: 171 ಟಿಆರ್‌ಎ.96 ದಿನಾಂಕ : 29-09-2000ದ ಮುಖಾಂತರ ಕರ್ನಾಟಕ ಸರ್ಕಾರವು ಅನುಮೋದನೆ ನೀಡಿರುತ್ತದೆ. ಈ ಪ್ರಸ್ತಾವನೆಯ ಪೈಲೆಟ್ ಪ್ರಾಜೆಕ್ಟ್ ಕಾರ್ಯಗತಗೊಳಿಸಲು ಸೀಡಾದಿಂದ ಆರ್ಥಿಕ ಸಹಾಯ ಕೋರಿ ಕೇಂದ್ರ ಸರ್ಕಾರಕ್ಕೆ ಸೀಡಾಗೆ ರವಾನಿಸಲು ಕಳುಹಿಸಲಾಗಿದೆ.

ಆ) ಜಯನಗರದಿಂದ ಶಿವಾಜಿನಗರದವರೆಗೆ ಪ್ರಸ್ತಾಪಿಸಿರುವ ಪೈಲೆಟ್ ಮೆಟ್ರೋ ಬಸ್ ವ್ಯವಸ್ಥೆಗೆ ಅಂದಾಜಿಸಿರುವ ವೆಚ್ಚವು ರೂ. 39.49 ಕೋಟಿಗಳು.

ಇ) ಸಂಸ್ಥೆಯು ಸೀಡಾದಿಂದ ಕೇಂದ್ರ ಸರ್ಕಾರದ ಮುಖಾಂತರ ಆರ್ಥಿಕ ಸಹಾಯವನ್ನು ಕೋರಿರುತ್ತದೆ. ಈ ಕೋರಿಕೆಯ ಫಲಿತಾಂಶಕ್ಕಾಗಿ ಎದುರು ನೋಡಲಾಗುತ್ತಿದೆ.

ವೋಲ್ವೋ ಬಸ್ ಸಂಚಾರ.

4218(4540) ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೆಂಗಳೂರಿನಿಂದ ರಾಜ್ಯದ ಯಾವ ಯಾವ ಸ್ಥಳಗಳಿಗೆ ವೋಲ್ವೋ ಬಸ್ ಸಂಚಾರವನ್ನು ಏರ್ಪಡಿಸಿದೆ.

ಆ) ಬೀದರ್ ಜಿಲ್ಲೆಯ ವಿವಿಧ ಸ್ಥಳಗಳಿಂದ ಬೆಂಗಳೂರು ನಗರಕ್ಕೆ ಹೈದರಾಬಾದ್ ಮಾರ್ಗವಾಗಿ ಪ್ರತಿ ದಿನ ಎಷ್ಟು ಬಸ್ಸುಗಳು ಸಂಚರಿಸುತ್ತಿವೆ. (ಈ ಮಾರ್ಗದಲ್ಲಿ ಸಂಚರಿಸುತ್ತಿರುವ ಎಕ್ಸ್‌ಪ್ರೆಸ್, ಅಲ್ಟ್ರಾ ಡಿಲಕ್ಸ್, ಏರ್ ಬಸ್, ಸುವಿಹಾರಿ ಹಾಗೂ ಆರ್ಡಿನರಿ ಬಸ್ಸುಗಳ ವಿವರ ಹಾಗೂ ಬಸ್ಸುಗಳು ಬೆಂಗಳೂರಿನಿಂದ ಹಾಗೂ ಬೀದರ್‌ನ ವಿವಿಧ ಸ್ಥಳಗಳಿಂದ ಹೊರಡುವ ಮತ್ತು ತಲುಪುವ ವೇಳೆಗಳ ಹಾಗೂ ಟಿಕೆಟ್ ದರಗಳ ವಿವರಗಳನ್ನು ಒದಗಿಸುವುದು)

ಇ) ಬೆಂಗಳೂರು ನಗರದಿಂದ ಬೀದರ್‌ಗೆ ಹೈದರಾಬಾದ್ ಮಾರ್ಗವಾಗಿ ಈಗ ವೋಲ್ವೋ ಬಸ್ ಸಂಚಾರವನ್ನು ಪ್ರಾರಂಭಿಸಲಾಗಿದೆಯೇ;

ಈ) ಹಾಗಿಲ್ಲದಿದ್ದಲ್ಲಿ, ಈ ಮಾರ್ಗದ ನಡುವೆ ವೋಲ್ವೊ ಬಸ್ ಸಂಚಾರವನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರ ಪರಿಶೀಲಿಸುವುದೆ;

ಉ) ಹಾಗಿದ್ದಲ್ಲಿ, ಎಂದಿನಿಂದ ಈ ಮಾರ್ಗದಲ್ಲಿ ಬಸ್ ಸಂಚಾರವನ್ನು ಪ್ರಾರಂಭಿಸುವುದು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :—

ಅ) ಹಾಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಯಾವುದೇ ವೋಲ್ವೋ ಬಸ್ಸನ್ನು ಕಾರ್ಯಾಚರಣೆಗೊಳಿಸುತ್ತಿಲ್ಲ.

ಆ) ಬೆಂಗಳೂರಿನಿಂದ ಹೈದರಾಬಾದ್ ಮುಖಾಂತರ ಬೀದರ್ ಜಿಲ್ಲೆಯ ವಿವಿಧ ಸ್ಥಳಗಳಿಗೆ ಪ್ರತಿದಿನ 4 ಬಸ್ಸುಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ. ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

| ಕ್ರ. ಸಂ. | ಮಾರ್ಗ | ಸೇವೆಯ ನಮೂನೆ | ಬಿಡುವ : ತಲುಪುವ ವೇಳೆ | | | |
|---|---|---|---|---|---|---|
| | | | ಬೆಂಗಳೂರು ಬಿಡುವ ವೇಳೆ | ಬೀದರ್ ತಲುಪುವ ವೇಳೆ | ಬೀದರ್ ಬಿಡುವ ವೇಳೆ | ಬೆಂಗಳೂರು ತಲುಪುವ ವೇಳೆ |
| 1) | ಬೆಂಗಳೂರು ಬೀದರ್ | ಡೀಲಕ್ಸ್ | 1730 | 0830 | 1700 | 0800 |
| 2) | ಬೆಂಗಳೂರು ಬೀದರ್ | ವೇಗದೂತ | 1630 | 0815 | 1815 | 1000 |
| | | | ಬೆಂಗಳೂರು ಬಿಡುವ ವೇಳೆ | ಭಾಲ್ಕಿ ತಲುಪುವ ವೇಳೆ | ಭಾಲ್ಕಿ ಬಿಡುವ ವೇಳೆ | ಬೆಂಗಳೂರು ತಲುಪುವ ವೇಳೆ |
| 3) | ಬೆಂಗಳೂರು ಭಾಲ್ಕಿ | ಡೀಲಕ್ಸ್ ಪ್ಲಸ್ | 1845 | 1200 | 1500 | 0815 |
| | | | ಬೆಂಗಳೂರು ಬಿಡುವ ವೇಳೆ | ಬಸವಕಲ್ಯಾಣ ತಲುಪುವ ವೇಳೆ | ಬಸವಕಲ್ಯಾಣ ಬಿಡುವ ವೇಳೆ | ಬೆಂಗಳೂರು ತಲುಪುವ ವೇಳೆ |
| 4) | ಬೆಂಗಳೂರು | | 1530 | 0900 | 1300 | 0630 |

ಬೆಂಗಳೂರು - ಬೀದರ್ ನಡುವಿನ ಪ್ರಯಾಣಿಕ ದರ
ಡೀಲಕ್ಸ್ ರೂ.373-00
ವೇಗದೂತ ರೂ.264-00

ಬೆಂಗಳೂರು - ಭಾಲ್ಕಿ ನಡುವಿನ ಪ್ರಯಾಣಿಕ ದರ
ಡೀಲಕ್ಸ್ ರೂ.407-00

ಬೆಂಗಳೂರು - ಬಸವ ಕಲ್ಯಾಣ ನಡುವಿನ ಪ್ರಯಾಣಿಕ ದರ
ರೂ. 403-00

ಇ) ಇಲ್ಲ

ಈ) ಸಂಸ್ಥೆಯು ತನ್ನ ಕಾರ್ಯಾಚರಣೆಗೆ ವೋಲ್ವೊ ಬಸ್ಸನ್ನು ಪಡೆದುಕೊಂಡ ಸಂದರ್ಭದಲ್ಲಿ ಪರಿಶೀಲಿಸಲಾಗುವುದು.

ಉ) ಉದ್ಭವಿಸುವುದಿಲ್ಲ.

*ಸಹಕಾರ ಸಂಘಗಳು.*

4221(4558) ಶ್ರೀ ರಾಜುಗೌಡ (ಹನ್ನೂರು) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದಲ್ಲಿ ಇರುವ ಸಹಕಾರ ಸಂಘಗಳ ಒಟ್ಟು ಸಂಖ್ಯೆ ಎಷ್ಟು?

2) ಅವುಗಳ ಒಟ್ಟು ಸದಸ್ಯರ ಸಂಖ್ಯೆ ಎಷ್ಟು?

3) ಬಂಡವಾಳ ರೂಪದಲ್ಲಿ ಇರುವ ಒಟ್ಟು ಹಣ ಮೊತ್ತ ಎಷ್ಟು?

4) ರಾಜ್ಯ ಸರ್ಕಾರದ ಷೇರು ಹಣ ಎಷ್ಟು?

5) ಸಹಕಾರ ಸಂಘಗಳು ಬಲಿಷ್ಟವಾಗಿ ಬೆಳೆಯಲು ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :—

1) 31-3-2000ರ ಅಂತ್ಯಕ್ಕೆ ಒಟ್ಟು ಸಹಕಾರ ಸಂಘಗಳು 28,708

2) 151.74 ಲಕ್ಷ ಸದಸ್ಯರುಗಳು

3) ರೂ. 1026.82 ಕೋಟಿ

4) 410.75 ಕೋಟಿ ರೂ.

5) ಸಹಕಾರ ಸಂಘಗಳು ಬಲಿಷ್ಟವಾಗಿ ಬೆಳೆಯಲು ಸರ್ಕಾರವು ಆರ್ಥಿಕ ಸಹಾಯ, ಅಡಳಿತಾತ್ಮಕ ಸಲಹೆ ಸಹಕಾರ ಮಾರ್ಗದರ್ಶನ ನೀಡುತ್ತದೆ.